ಒ ಎಸ್ ನಂ.**7091/2022**
ಪಿ.ಡಬ್ಲ್ಯೂಃ**1**

**<u>ದಿನಾಂಕಃ 10.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-</u>**

2007 ರಿಂದ 2009 ನೇ ಸಾಲಿನಲ್ಲಿ ನನ್ನ ಸಂಬಳ ತಿಂಗಳಿಗೆ 14-15 ಸಾವಿರ ರೂಪಾಯಿ ಇತ್ತು. ಆ ಸಮಯಲ್ಲಿ ನಾನು ಕೆಲಸ ಮಾಡುತ್ತಿದ್ದ ವಿಷಯ ನನ್ನ ತಂದೆ ತಾಯಿಗೆ ಮತ್ತು 1 ನೇ ಪ್ರತಿವಾದಿಗೆ ಗೊತ್ತಿತು. ಆ ಕಾಲಕ್ಕೆ ನನಗೆ ಬರುತ್ತಿದ್ದ ಸಂಬಳದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಆ ಕಾಲಕ್ಕೆ ಮನೆ ಬಾಡಿಗೆ ಮತ್ತು ಇತರೆ ಖರ್ಚಿಗೆ ತಿಂಗಳಿಗೆ 9 ಸಾವಿರ ರೂಪಾಯಿ ಬೇಕಾಗುತ್ತಿತ್ತು. ಮನೆ ಬಾಡಿಗೆ ತಿಂಗಳಿಗೆ 2,500/- ರೂಪಾಯಿ ಇತ್ತು. ಆ ಕಾಲಕ್ಕೆ ನನಗೆ ಬರುತ್ತಿದ್ದ ಸಂಬಳ ನನ್ನ ಖರ್ಚಿಗೆ ಸಾಕಗುತ್ತಿರಲಿಲ್ಲ ಮತ್ತು ನಾನು ಬೆಂಗಳೂರಿಗೆ ಬಂದು 1 ನೇ ಪ್ರತಿವಾದಿಯಿಂದ ಹಣ ಪಡೆದುಕೊಂಡು ಹೋಗುತ್ತಿದ್ದೆ ಎನ್ನುವುದು ಸರಿಯಲ್ಲ. 2009-10 ರಲ್ಲಿ ನಾನು ಸುಧಾಮನಗರದಲ್ಲಿ ಇದ್ದೆನು. ಆ ಕಾಲಕ್ಕೆ ನಾನು ಆಕೋಮ್ ಫೈನಾನ್ಸ್ ಸರ್ವೀಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆನು. ಆ ಕೆಲಸದ ಬಗ್ಗೆ ನನ್ನ ತಂದೆ ತಾಯಿಗೆ ಮತ್ತು 1 ನೇ ಪ್ರತಿವಾದಿಗೆ ತಿಳಿಸಿದ್ದೆನು. ನಾನು ಸುಧಾಮನಗರದಲ್ಲಿದ್ದಾಗ ಐದಾರು ಜನರಿಂದ ಸಾಲ ಪಡೆದಿದ್ದೆನು ಮತ್ತು ಅದನ್ನು ನನಗೆ ಹಿಂತಿರುಗಿಸಲು ಆಗಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ಆ ಕಾಲಕ್ಕೆ ಪಾರ್ಟ್ ಟೈಮ್ ಕೆಲಸ ಮಾಡುತ್ತಿರಲಿಲ್ಲ. ಆ ಕಾಲಕ್ಕೆ ನಾನು ಪಿ ಯು ಸಿ ವಿದ್ಯಾರ್ಥಿಗಳಿಗೆ ಟ್ಯೂಷನ್ ಹೇಳಿಕೊಡುತ್ತಿದ್ದೆ ಎನ್ನುವುದು ಸರಿಯಲ್ಲ. ಪಿ ಯು ಸಿ ವಿದ್ಯಾರ್ಥಿಗಳಿಗೆ Rank ಕೊಡುಸುತ್ತೇನೆ ಎಂದು ಅಕ್ರಮವಾಗಿ ಹಣ ಪಡೆಯುತ್ತಿದ್ದೆ ಎನ್ನುವುದು ಸರಿಯಲ್ಲ. ಇಬ್ಬರು ವಿದ್ಯಾರ್ಥಿಗಳಿಗೆ ಪ್ರಥಮ ದರ್ಜೆಯಲ್ಲಿ ಪಾಸ್ ಮಾಡಿಸುತ್ತೇನೆ ಮತ್ತು ಕೆರಿಯರ್ ಬಿಲ್ಡ್ ಮಾಡಿಕೊಡುತ್ತೇನೆ ಎಂದು ಹೇಳಿ ಅವರಿಂದ ಹಣ ಪಡೆದಿದ್ದೆ ಎನ್ನುವುದು ಸರಿಯಲ್ಲ. ಆ ವಿದ್ಯಾರ್ಥಿಗಳಿಂದ ಪಡೆದ ಹಣವನ್ನು ವಾಪಸ್ಸು ಪಡೆಯಲು ಆ ವಿದ್ಯಾರ್ಥಿಗಳ ಪೋಷಕರು ನನ್ನ ತಂದೆಯ ಬಳಿ ಬಂದು ಕೇಳಿದ್ದರು ಎನ್ನುವುದು ಸರಿಯಲ್ಲ. ಆ ಕಾಲಕ್ಕೆ ನನಗೆ ಮನೆ ಬಾಡಿಗೆ ಕೊಡಲು ಹಣ ಇರುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಆ ಕಾಲಕ್ಕೆ ಮನೆ ಬಾಡಿಗೆಯನ್ನು ನನ್ನ ತಂದೆಯೇ ಕಟ್ಟುತ್ತಿದ್ದರು ಎನ್ನುವುದು ಸರಿಯಲ್ಲ. ನಾನು ವಿದ್ಯಾರ್ಥಿಗಳಿಗೆ ಮೋಸ ಮಾಡಿದ ಹಣವನ್ನು ಕೂಡ ನನ್ನ ತಂದೆಯೇ ಕಟ್ಟಿದ್ದಾರೆ ಎನ್ನುವುದು ಸರಿಯಲ್ಲ.

2009 ರಲ್ಲಿ ಒಂದು ಬಾರಿ ನಾನು ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದೆ ಎನ್ನುವುದು ನಿಜ. 1 ನೇ ಪ್ರತಿವಾದಿ ನನಗೆ ಹಾಲಿನಲ್ಲಿ ನಿದ್ದೆ ಮಾತ್ರೆಗಳನ್ನು ಬೆರಸಿ ಕೊಟ್ಟಿದ್ದ ಕಾರಣಕ್ಕಾಗಿ ನಾನು ಅಗಡಿ ನರ್ಸಿಂಗ್ ಹೋಮ್ ಆಸ್ಪತ್ರೆಗೆ ದಾಖಲಾಗಿದ್ದೆ. ಆ ಬಗ್ಗೆ ಆಸ್ಪತ್ರೆಯ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಆಸ್ಪತ್ರೆಯ ದಾಖಲೆಗಳನ್ನು ಕೊಡುವಂತೆ 1 ನೇ ಪ್ರತಿವಾದಿಗೆ ನಾನು ಕೇಳಿದೆನು ಆದರೆ ಅವಳು ಕೊಡಲಿಲ್ಲ. ನನ್ನ ತಂದೆ ಆ ಬಗ್ಗೆ ಪೊಲೀಸರಿಗೆ ದೂರು ಕೊಡುವುದು ಬೇಡ ಎಂದು ಹೇಳಿದ್ದಕ್ಕೆ ನಾನು ದೂರು ಕೊಟ್ಟಿರುವುದಿಲ್ಲ. ನಿಮಗೆ 1 ನೇ ಪ್ರತಿವಾದಿಯ ಮೇಲೆ ದೂರು ಕೊಡಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿ ಅವಳು ನನ್ನ ಸಹೋದರಿಯಾಗಿದ್ದರಿಂದ ದೂರು ಕೊಡಲಿಲ್ಲ ಎನ್ನುತ್ತಾರೆ. ನಾನು ಮನೆಯಲ್ಲಿ ಎಲ್ಲರು ಇದ್ದಾಗ ಸಿಂಕ್ ಬಳಿ ಹೋಗಿ ವಾಂತಿ ಮಾಡಿಕೊಂಡಿದ್ದೆ ಎನ್ನುವುದು ಸರಿಯಲ್ಲ. ಆಗ ಮನೆಯ ಸದಸ್ಯರು ಗಾಬರಿಯಿಂದ ಏನಾಗಿದೆ ಎಂದು ಕೇಳಿದಾಗ ನನಗೆ ಬ್ಲಡ್ ಕ್ಯಾನ್ಸರ್ ಆಗಿದೆ ಎಂದು ಹೇಳಿದೆ ಎನ್ನುವುದು ಸರಿಯಲ್ಲ. ನನ್ನನ್ನು ಆಸ್ಪತ್ರೆಗೆ ದಾಖಲಿಸಿದಾಗ ಆಸ್ಪತ್ರೆಯವರು ನನಗೆ ಯಾವುದೇ ಕಾಯಿಲೆ ಇಲ್ಲ ಎಂದು ಹೇಳಿದರು ಎನ್ನುವುದು ಸರಿಯಲ್ಲ. ನನ್ನ ತಂದೆಯಿಂದ ಹಣ ಪಡೆಯುವ ಸಲುವಾಗಿ ಆ ರೀತಿ ನಾನು ಮನೆಯಲ್ಲಿ ವಾತಾವರಣ ಸೃಷ್ಟಿಸಿದ್ದೆ ಎನ್ನುವುದು ಸರಿಯಲ್ಲ. ನಾನು ಹೊರದೇಶಕ್ಕೆ ಕೆಲಸ ಹುಡುಕಿಕೊಂಡು ಹೋಗುವ ಪ್ರಯತ್ನ ಮಾಡಿರಲಿಲ್ಲ. ನಾನು ಹೊರದೇಶಕ್ಕೆ ಕೆಲಸಕ್ಕೆ ಹೋಗಲು ಮಾತನಾಡಿದ್ದೆ ಮತ್ತು ಹಠ ಹಿಡಿದಿದ್ದೆ ಎನ್ನುವುದು ಸರಿಯಲ್ಲ. ನನ್ನ ತಂದೆ ಹೊರದೇಶಕ್ಕೆ ಹೋಗುವುದು ಬೇಡ ಇಲ್ಲೇ ಕೆಲಸ ಮಾಡು ಎಂದು ಹೇಳಿದ್ದರು ಎನ್ನುವುದು ಸರಿಯಲ್ಲ. ಈ ವಿಚಾರವಾಗಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ಜೊತೆ ನಾನು ಹಲವಾರು ಬಾರಿ ಜಗಳವಾಡಿದ್ದೆ ಎನ್ನುವುದು ಸರಿಯಲ್ಲ.

ನನ್ನ ತಂದೆಗೆ ಸಕ್ಕರೆ ಕಾಯಿಲೆ ಮತ್ತು ಹೃದಯ ಸಂಬಂಧಿ ಕಾಯಿಲೆ ಇತ್ತು. ನನ್ನ ತಂದೆಯ ಆಸ್ಪತ್ರೆಯ ಖರ್ಚಿನ ಹಣವನ್ನು ಆತನ ಕೈಗೆನೇ ಕೊಡುತ್ತಿದ್ದೆನು. ಆಗ ನನ್ನ ತಂದೆ ಓಡಾಡಿಕೊಂಡು ಇದ್ದರು ಮತ್ತು ಆತನ ಮಾನಸಿಕ ಸ್ಥಿತಿಯು ಚೆನ್ನಾಗಿತ್ತು ಎನ್ನುವುದು ಸರಿಯಲ್ಲ. ನನ್ನ ತಂದೆ ನನ್ನ ಜೊತೆ ಮತ್ತು ನನ್ನ ಸಹೋದರಿ 1 ನೇ ಪ್ರತಿವಾದಿ ಯ ಜೊತೆ ಒಳ್ಳೆಯ ಸಂಬಂಧ ಹೊಂದಿದ್ದರು ಎನ್ನುವುದು ನಿಜ. ನನ್ನ ತಂದೆ ಆತನ ಜೊತೆ ಅಟೆಂಡೆಂಡ್ ಎಂದು ನನ್ನ ಹೆಸರನ್ನು ಆಸ್ಪತ್ರೆಯಲ್ಲಿ ಬರೆಸುತ್ತಿರಲಿಲ್ಲ. ದಿನಾಲು ಸಂಜೆ ನನ್ನ ತಂದೆಯ ಜೊತೆ ನಾನು ಆಸ್ಪತ್ರೆಗೆ ಹೋಗುತ್ತಿದ್ದೆನು. ನನ್ನ ತಂದೆಯ ನಾನು ಅಟೆಂಡೆಂಡ್ ಎಂದು ಆಸ್ಪತ್ರೆಯ ದಾಖಲೆಗಳಲ್ಲಿ ನನ್ನ ಹೆಸರು ಬರೆಸಲು ಯಾವುದೇ ತೊಂದರೆ ಇರಲಿಲ್ಲ ಎನ್ನುವುದು ಸರಿಯಲ್ಲ.

ದಿಃ 06.01.2019 ರಲ್ಲಿ ನನ್ನ ತಂದೆಗೆ ಆಕ್ಸಿಜನ್ concentrator ಕೊಡಿಸುತ್ತಿದ್ದರು ಎನ್ನುವುದು ನಿಜ. ಅದರ ಬಾಡಿಗೆ ವಾರಕ್ಕೆ 3,500/- ರೂಪಾಯಿ ಆಗಿತ್ತು ಎನ್ನುವುದು ನಿಜ. 1 ನೇ ಪ್ರತಿವಾದಿ ಆ ಬಾಡಿಗೆ ಹಣವನ್ನು ಪಾವತಿಸುತ್ತಿದ್ದಳು ಎನ್ನುವುದು ಸರಿಯಲ್ಲ. ದಿಃ 12.10.2017 ರಂದು ನನ್ನ ತಂದೆ ಆರೋಗ್ಯವಾಗಿದ್ದಾಗ 1 ನೇ ಪ್ರತಿವಾದಿಯ ಹೆಸರಿಗೆ ನೊಂದಾಯಿತ ದಾನಪತ್ರ ಮಾಡಿಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಸಾಕ್ಷಿಗೆ ದಿಃ 12.10.2017 ರ ದಾನಪತ್ರದ ಡಿಜಿಟಲ್ ದೃಡೀಕೃತ ನಕಲನ್ನು ಅದರಲ್ಲಿನ 2 ನೇ ಪ್ರತಿವಾದಿಯ ಸಹಿಯನ್ನು ತೋರಿಸಿದಾಗ ಸಾಕ್ಷಿ ಗುರುತಿಸುತ್ತಾರೆ. ಸದರಿ ದಾಖಲೆಯನ್ನು 1 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ **ನಿಡಿ.1** ಎಂದು ಗುರುತಿಸಲಾಯಿತು. ಸದರಿ ದಾನಪತ್ರದ ಆದಾರದ ಮೇಲೆ 1 ನೇ ಪ್ರತಿವಾದಿಯ ಹೆಸರು Encumbrance certificate ನಲ್ಲಿ ಬರುತ್ತಿದೆ ಎನ್ನುವುದು ನಿಜ. 1 ನೇ ಪ್ರತಿವಾದಿಯೇ ಕಂದಾಯ ಕಟ್ಟಿ, ಕಂದಾಯ ಪಾವತಿ ರಶೀದಿಗಳನ್ನು ಹಾಜರು ಪಡಿಸಿದ್ದಾಳೆ ಎನ್ನುವುದು ನಿಜ. ದಿಃ 23.01.2019 ರಂದು ನನ್ನ ತಂದೆ ತೀರಿಕೊಂಡರು. ನನ್ನ ತಂದೆ ತೀರಿಕೊಂಡಾಗ ನಾನು ಆಸ್ಪತ್ರೆಗೆ ಹೋಗಿ ಹಣ ಕಟ್ಟಿ ಅವರ ಶವವನ್ನು ತೆಗೆದುಕೊಂಡು ಹೋಗಿರಲಿಲ್ಲ. ನಂತರ ನಾನು ಅಂತಿಮ ಸಂಸ್ಕಾರಕ್ಕೆ ಮಸೀದಿ ಬಳಿಗೆ ಹೋದೆನು. ನನ್ನ ತಂದೆಯ ಅಂತಿಮ ದರ್ಶನವನ್ನು ಮಸೀದಿಯಲ್ಲಿ ಪಡೆದೆನು. ನಂತರ ಸ್ಮಶಾಣಕ್ಕೆ ಹೋಗಿ ಅಂತಿಮ ಕ್ರಿಯಾ ಕರ್ಮಗಳನ್ನು ನನ್ನ ಕುಟುಂಬದ ಸದಸ್ಯರ ಜೊತೆಗೆ ಮಾಡಿದೆನು. ನನ್ನ ತಂದೆಯ ಶವವನ್ನು 1 ನೇ ಪ್ರತಿವಾದಿಯೇ ಆಸ್ಪತ್ರೆಯಲ್ಲಿ ಬಿಲ್ ತುಂಬಿ ಬಿಡಿಸಿಕೊಂಡು ಹೋಗಿದ್ದಾಳೆ ಎನ್ನುವುದು ಸರಿಯಲ್ಲ. ನನ್ನ ತಂದೆಯ ಶವಸಂಸ್ಕಾರದ ಯಾವುದೇ ವಿಧಿ-ವಿಧಾನಗಳನ್ನು ನಾನು ಮಾಡಿಲ್ಲ ಎನ್ನುವುದು ಸರಿಯಲ್ಲ. ಶವಸಂಸ್ಕಾರ ಮಾಡುವಾಗ ಹೆಣ್ಣು ಮಕ್ಕಳಿಗೆ ಅವಕಾಶವಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಶವದ ಬಳಿ ಹೋಗಿಯೇ ಇಲ್ಲ ಮತ್ತು ಎಲ್ಲಾ ಶವಸಂಸ್ಕಾರವನ್ನು 1 ನೇ ಪ್ರತಿವಾದಿಯೇ ಮಾಡಿದ್ದಾಳೆ ಎನ್ನುವುದು ಸರಿಯಲ್ಲ. ಸ್ಮಶಾಣದಲ್ಲಿ ಎಲ್ಲಾ ಸಂಸ್ಕಾರವನ್ನು ನನ್ನ ಚಿಕ್ಕಪ್ಪ ಜಫರುಲ್ಲಾಖಾನ್ ಮಾಡಿದ್ದಾನೆ, ಆ ಕಾಲಕ್ಕೆ ನಾನು ತಮಿಳುನಾಡಿನಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದೆನು. ನಾನು ಶವಸಂಸ್ಕಾರಕ್ಕೆ ಯಾವುದೇ ಹಣ ಸಂದಾಯ ಮಾಡಿಲ್ಲ ಮತ್ತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನನಗೆ ಅನ್ಯಾಯವಾಗಿದೆ ಎಂದು ಹೇಳಿ ನನ್ನ ವಕೀಲರ ಮುಖಾಂತರ 1 ನೇ ಪ್ರತಿವಾದಿಗೆ ನೋಟಿಸ್ ಕಳುಹಿಸಿದ್ದೇನೆ ಎನ್ನುವುದು ನಿಜ.

ಸದರಿ ನೋಟಿಸ್ 1 ನೇ ಪ್ರತಿವಾದಿಗೆ ಜಾರಿಯಾಗಿದೆ. 1 ನೇ ಪ್ರತಿವಾದಿಯ ಫೋನ್ ನಂಬರನ್ನು ವಕೀಲರಿಗೆ ಕೊಟ್ಟಿದ್ದೆನು. ನೋಟಿಸ್ ನಲ್ಲಿ ಫೋನ್ ನಂಬರ್ ನಮೂದಿಸಿಲ್ಲ ಎನ್ನುವುದು ನಿಜ. ನಮ್ಮವರೇ ಯಾರೋ ಸದರಿ ನೋಟಿಸ್ ನ್ನು ಸ್ವೀಕರಿಸಿದ್ದಾರೆ ಮತ್ತು ಅದರ ಬಗ್ಗೆ 1 ನೇ ಪ್ರತಿವಾದಿಗೆ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ. ನಮ್ಮವರೇ ಯಾರೋ No such person ಎಂದು ಪೋಸ್ಟಲ್ ಶರಾದೊಂದಿಗೆ ನೋಟಿಸ್ ನ್ನು ವಾಪಸ್ಸು ಕಳುಹಿಸಿದ್ದಾರೆ ಎನ್ನುವುದು ಸರಿಯಲ್ಲ. ನನ್ನ ತಂದೆ ಸ್ವಇಚ್ಛೆಯಿಂದ 1 ನೇ ಪ್ರತಿವಾದಿಗೆ ದಾನಪತ್ರ ಬರೆದುಕೊಟ್ಟಿದ್ದಾನೆ ಮತ್ತು ಅದಕ್ಕೆ ನನ್ನ ತಾಯಿ ಸಾಕ್ಷಿದಾರಳಾಗಿ ಸಹಿ ಹಾಕಿದ್ದಾಳೆ ಎನ್ನುವುದು ಸರಿಯಲ್ಲ. ನನ್ನ ತಂದೆ ತೀರಿಕೊಂಡ ಮೇಲೆ ಕೋವಿಡ್-19 ರ ಸಮಯದಲ್ಲಿ ನನಗೆ ಯಾವುದೇ ಆದಾಯವಿರಲಿಲ್ಲ ಮತ್ತು ಅಸಾಯಕನಾಗಿದ್ದೆ ಎನ್ನುವುದು ಸರಿಯಲ್ಲ. ಆ ಕಾಲಕ್ಕೆ 1 ನೇ ಪ್ರತಿವಾದಿಯಿಂದ ಹಣಕಾಸಿನ ಸಹಾಯ ಪಡೆದಿರುತ್ತೇನೆ ಎನ್ನುವುದು ಸರಿಯಲ್ಲ. ನನ್ನ ತಂದೆ ತೀರಿಕೊಂಡ ಮೇಲೆ 1 ನೇ ಪ್ರತಿವಾದಿಯ ಜೊತೆ ವಾಸವಾಗಿದ್ದಳು. ನಾನು ವಾಸವಾಗಿರುವ ತಮಿಳುನಾಡಿನ ಗುಡಿಯಾ ಗ್ರಾಮಕ್ಕೆ ನನ್ನ ತಾಯಿ ತಿಂಗಳಲ್ಲಿ ಒಂದರೆಡು ಬಾರಿ ಬಂದು ಹೋಗುತ್ತಿದ್ದಳು. ನನ್ನ ತಾಯಿಯ ಜೊತೆ 1 ನೇ ಪ್ರತಿವಾದಿಯು ಕೂಡ ನನ್ನ ಮನೆಗೆ ಬರುತ್ತಿದ್ದಳು. ಕೋವಿಡ್-19 ರ ಸಮಯದಲ್ಲಿ ನಾನು 1 ನೇ ಪ್ರತಿವಾದಿಗೆ ಹಣಕಾಸಿನ ಸಹಾಯ ಕೇಳಿದಾಗ ಅವಳು ಕೊಡದೇ ಇದ್ದಾಗ ಅವಳ ಜೊತೆ ನಾನು ಜಗಳವಾಡಿದ್ದೆ ಎನ್ನುವುದು ಸರಿಯಲ್ಲ. ಆ ಕಾರಣಕ್ಕಾಗಿ 1 ನೇ ಪ್ರತಿವಾದಿ ನನ್ನ ಮನೆಗೆ ಬಂದಿರುವುದಿಲ್ಲ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ಕೇವಲ ನನ್ನ ತಾಯಿ ಅಂದರೆ 2 ನೇ ಪ್ರತಿವಾದಿಯನ್ನು ನನ್ನ ಮನೆಗೆ ಕಳುಹಿಸುತ್ತಿದ್ದಳು ಎನ್ನುವುದು ಸರಿಯಲ್ಲ.

1 ನೇ ಪ್ರತಿವಾದಿ ಅಲ್ ಹಚ್ ಅಥರ್ ಹುಸೇನ್ ವತ್ ಸಂಸ್ಥೆಯಲ್ಲಿ ಕಂಪ್ಯೂಟರ್ ಟೀಚರ್ ಆಗಿ ಪಾರ್ಟ್ ಟೈಮ್ ಕೆಲಸಕ್ಕೆ ಹೋಗುತ್ತಿದ್ದಳು ಎನ್ನುವುದು ನನಗೆ ಗೊತ್ತಿಲ್ಲ. ಆ ಸಂಸ್ಥೆಯಲ್ಲಿ ಸಾಲವನ್ನು ಪಡೆದು 1 ನೇ ಪ್ರತಿವಾದಿ ನನಗೆ ಕೊಟ್ಟಿದ್ದಾಳೆ ಎನ್ನುವುದು ಸರಿಯಲ್ಲ. ದಾವಾ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳ ಬಗ್ಗೆ ನನಗೆ 2022 ರಲ್ಲಿ ಗೊತ್ತಾಯಿತು. 1 ನೇ ಪ್ರತಿವಾದಿಗೆ ದಾವಾ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳ ಬಗ್ಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎನ್ನುವುದು ನಿಜ. ದಾನಪತ್ರ ಬರೆದುಕೊಡುವ ಮುಂಚೆಯು ಕೂಡ ಆ ವಿಷಯ ನನಗೆ ಗೊತ್ತಿತ್ತು ಎನ್ನುವುದು ಸರಿಯಲ್ಲ. ನನ್ನ ತಂದೆ ತಾಯಿ ಮತ್ತು ನನಗೆ ಈ ದಾನಪತ್ರ ಮಾಡುವ ವಿಷಯ ಮೊದಲೇ ಗೊತ್ತಿತ್ತು ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ತಂದೆ ತಾಯಿಗೆ ಸುಳ್ಳು ಹೇಳಿ ದಾನಪತ್ರ ಬರೆಯಿಸಿಕೊಂಡಿದ್ದಾಳೆ. ನನ್ನ ತಂದೆ ಸ್ವಇಚ್ಛೆಯಿಂದ ಮತ್ತು ಯಾವುದೇ ಒತ್ತಡವಿಲ್ಲದೆ ದಾನಪತ್ರ ಬರೆದುಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ದಾನಪತ್ರದ ಬಗ್ಗೆ ನಮ್ಮ ಕುಟುಂಬದ ಸದಸ್ಯರಲ್ಲಿ ವಿಚಾರ ಮಾಡಲು

ಏನು ತೊಂದರೆ ಇತ್ತು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ನನ್ನ ತಂದೆ ತಾಯಿ ಜೊತೆ ನಾನು ಒಳ್ಳೆಯ ಒಡನಾಟ ಹೊಂದಿದ್ದರು ಕೂಡ, 1 ನೇ ಪ್ರತಿವಾದಿ ನಾನು ಕೇಳಿದಾಗ ಹಣ ಕೊಡಲಿಲ್ಲ ಎನ್ನುವ ಕಾರಣಕ್ಕೆ ಈ ಸುಳ್ಳು ದಾವೆ ಹೂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು 7 ರಿಂದ 8 ಲಕ್ಷ ರೂಪಾಯಿ ಸಾಲ ಪಡೆದಿದ್ದೇನೆ ಹಣ ಕೊಡು ಎಂದು 1 ನೇ ಪ್ರತಿವಾದಿಯನ್ನು ಕೇಳಿದೆ ಎನ್ನುವುದು ಸರಿಯಲ್ಲ. ಹಣ ಕೊಡದೇ ಹೋದರೆ ನಿನ್ನ ಮಾನ ತಗೆಯುತ್ತೇನೆ ಮತ್ತು ಕೇಸು ಹಾಕುತ್ತೇನೆ ಎಂದು 1 ನೇ ಪ್ರತಿವಾದಿಗೆ ಬೆದರಿಸಿದ್ದೇನೆ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ನನಗೆ ಹಣ ಕೊಡದೆ ಇದ್ದುದ್ದಕ್ಕೆ ನಾನು ಅವಳ ಮೇಲೆ ಈ ಸುಳ್ಳು ದಾವೆ ಹೂಡಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿ ದಾನಪತ್ರದ ಪ್ರಕಾರ 1 ನೇ ಪ್ರತಿವಾದಿಗೆ ಸೇರತಕ್ಕದ್ದು ಆಗಿದೆ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ನನಗೆ ಅವಳ ಬೇಟಿಗೆ ಅವಕಾಶ ನೀಡದೆ ಇದ್ದಾಗ ಮತ್ತು ಹಣ ಕೊಡದೇ ಇದ್ದಾಗ ಈ ಸುಳ್ಳು ದಾವೆ ಹೂಡಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತಂದೆ ಆತನಿಗೆ ಸೇರಿದ ಆಸ್ತಿಯನ್ನು 1 ನೇ ಪ್ರತಿವಾದಿಗೆ ದಾನಪತ್ರದ ಮುಖಾಂತರ ಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**